ಅಧ್ಯಕ್ಷರು.—ಕನ್ನಡದಲ್ಲಿ ಹೇಳಬೇಕೆನ್ನುತ್ತೀರಾ, ಆಗಬಹುದು. ಕರ್ನಾಟಕ ವಿಧಾನಸಭೆ'ಯಂ ಕಾರ್ಯವಿಧಾನ ಹಾಗೂ ನಡವಳಿಕೆಯ ೨೦೭–ಬಿ ನಿಯಮದ ಪ್ರಕಾರ ನಾನು ಈ ಸಭೆಯ ಈ ಕೆಳಕಂಡ ಮಾನ್ಯ ಸದಸ್ಯರುಗಳನ್ನು ಸದನದ ಕಾರ್ಯಕಲಾಪಗಳ ಸಲಹಾ ಸಮಿತಿಗೆ ನಾಮಕರಣ ಮಾಡುತ್ತೇನೆ.

೧. ಶ್ರೀ ರಾಮಕೃಷ್ಣ ಹೆಗಡೆ — ಮುಖ್ಯ ಮಂತ್ರಿಗಳು
೨. ಶ್ರೀ ಎ. ಲಕ್ಷ್ಮೀಸಾಗರ್ — ಕಾನೂನು ಮಂತ್ರಿಗಳು
೩. ಶ್ರೀ ಹೆಚ್. ಡಿ. ದೇವೇಗೌಡ — ಲೋಕೋಪಯೋಗಿ ಸಚಿವರು
೪. ಶ್ರೀ ಎಂ. ಎಸ್. ಕೃಷ್ಣನ್
೫. ಶ್ರೀ ಆರ್. ವೆಂಕಟರಾಮಯ್ಯ
೬. ಶ್ರೀ ಬಿ. ಎಸ್. ಯಿಡಿಯೂರಪ್ಪ
೭. ಶ್ರೀ ಆರ್. ಎಸ್. ಮಾನೆ
೮. ಶ್ರೀ ಬಿ. ಬಸವಯ್ಯ
೯. ಶ್ರೀಮತಿ. ಕೆ, ಎಸ್. ನಾಗರತ್ನಮ್ಮ
೧೦. ಶ್ರೀ ಎಸ್. ಬಂಗಾರಪ್ಪ — ವಿರೋಧ ಪಕ್ಷದ ನಾಯಕರು.

ಈ ಸಮಿತಿಯು ನಂತರ ಸಭೆ ಸೇರುತ್ತದೆ.

ಆಮೇಲೆ ಪ್ಯಾನೆಲ್ ಆಫ್ ಚೇರ್ಮೆನ್.—ಈ ಪಟ್ಟಿಯಲ್ಲಿ ಆರಂಜನ ಸದಸ್ಯರು ಇದ್ದಾರೆ.

೧. ಶ್ರೀ ಎಂ. ಎಸ್. ನಾರಾಯಣರಾವ್
೨. ಶ್ರೀ ಹೆಚ್. ಡಿ. ಚೌಡಯ್ಯ
೩. ಡಾ ಬಿ. ಎಂ. ತಿಪ್ಪೆಸ್ವಾಮಿ
೪. ಶ್ರೀ ಎಸ್. ಪುಟ್ಟಸ್ವಾಮಿ
೫. ಶ್ರೀಮತಿ ಮನೋರಮಾ ಮಧ್ವರಾಜ್
೬. ಶ್ರೀಮತಿ ಲೀಲಾವತಿ ಆರ್. ಪ್ರಸಾದ್

ಈಗ ವಿಧಾನಮಂಡಲದ ಕಾರ್ಯದರ್ಶಿಯವರು ತಮ್ಮ ವರದಿಯನ್ನು ಮಂಡಿಸುತ್ತಾರೆ.

ಕಾರ್ಯದರ್ಶಿಗಳು.—ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಒಂದು ಪ್ರತಿಯನ್ನು.....

SRI K. H. PATIL.—Sir, I am on a point of order. My point is whether the Secretary can lay the Governor's Address on the table of the House? According to the Article 168 of the Constitution of India, the Legislature comprises three wings viz., i) Governor ii) Legislative Assembly iii) Legislative Council and the Joint Session is a part and parcel of it. So, Now we are allowing the Secretary to lay speech of the Governor addressed to the Joint Session of the Legislature. At this point of time we will have to consider whether the Houses have been constituted according to Articles 168, 169 and 171 of the Constitution? The Governor is a constitutionally appointed person and the Legislative Assembly is also duly constituted according to the provisions of the Constitution of India. But, the Legislative Council, under Article 171 is not properly composed. In other words, the composition of the Karnataka Legislative Council is not proper. The minimum number required is 40, that is

ot there. That is mandatory provision. It is not only at the time of the constitution of House, but the composition requires at all times 0 Members and whenever the number is less, then it becomes defunct. So, the defunct House cannot function. I am reading the Article 171 of the Constitution for your kind reference ;

> "Composition of the Legislative Councils:—(1) The total number of members in the Legislative Council of a State having such a council shall not exceed one-third of the total number of members in the Legislative Assembly of that State :
>
> Provided that the total number of members in the Legi-slative Council of a State shall in no case be less than forty".

Sir, you are fully aware that the object of the framers of Constitution is very very clear. They have fixed mimum and maximum numbers for both the Houses. It is goes beyond that, or comes below, it becomes a paralysed Institution and naturally it cannot function. When it cannot function, its validity is questionable under the Constitution. The only remedy left for us is to fill up the gap by electing Members. Until then the body becomes defunct and it cannot be called as Joint Session of the Legislature. Therefore, I submit sir, the Address made by the Governor to this Joint Session cannot be considered as a valid Address; it cannot be placed on the Agenda and we should not be constrained to take trouble of replying the House on the Governor's Address. We have already apprised his Excellency the Governor through a representation. But, we do not know what he has done about it. Anyway, this is the point which I would like to bring to your kind notice and seek your appropriate ruling. I hope and trust that you will upheld the dignity and decorum of the Legislative by giving an appropriate ruling in this behalf.

SRI RAMAKRISHNA HEGADE.—Sir, under Article 171 (1) of the Constitution, at the time of the Constitution, of the Council, the total strength of the Council shall not be less than 40. At the time of the constitution of this Council, it was more than 40, and therefore. it does not suffer from any Constitutional infirmity. ವೇಕೆನ್ಸಿ ನಾಲ್ಕೇ ಇರಲಿ, ಐದೇ ಇರಲಿ, ಆರೇ ಇರಲಿ ಒಂದು ಸಲ-ರಚನೆಯಾದ ಮೇಲೆ ಆ ವೇಕೆನ್ಸಿಯನ್ನು ತುಂಬಬೇಕು ; ತುಂಬತಕ್ಕ ಕ್ರಮವನ್ನು ತೆಗೆದುಕೊಂಡಿದ್ದೇವೆ. ಈಗಾಗಲೇ ಎಲೆಕ್ಷನ್ ಕಮಿಷನರ್ ಅವರಿಗೆ ಇದರ ಬಗ್ಗೆ ನಾವು ಬರೆದಿದ್ದೇವೆ. ಅವರೂ ಕೂಡ ಒಂದು ತಾರೀಖನ್ನು ನಿಗದಿ ಮಾಡಿದ್ದಾರೆ ಎಲ್ಲಿಯವರೆಗೆ ವೇಕೆನ್ಸಿ ಇರುತ್ತದೋ ಅಲ್ಲಿಯವರೆಗೆ ಈ ಮನೆಯ ಒಟ್ಟು ಸದಸ್ಯತ್ವದ ಸಂಖ್ಯೆ ಕಡಿಮೆ ಎಂದು ತಿಳಿದುಕೊಳ್ಳುವುದು ಸರಿಯಲ್ಲ. ಆದುದರಿಂದ ತಪ್ಪು ವಾದದಲ್ಲಿ ಯಾವುದೇ ಸತ್ವ ವಿಲ್ಲವೆಂದು ಹೇಳಬಯಸುತ್ತೇನೆ.

SRI K. H. PATIL.—Sir, I would like the Hon. Chief Minister to point out where it is mentioned as "at the time of the constitution of the Coucil" under Article 171 of the Constitution. Sir, it deals with the composition of the Legislative Council. The Hon. Leader of the House, will agree with me that the Composition of the House cannot be the Constitution of the House. The Constitution prescribes that there should be certain number of Members in the Legislative Council of a State. Certain number has been prescribed which cannot be taken away by anybody.

SRI S. BANGARAPPA.—Sir, I support the contention putforth by the hon. Member Sri K. H. Patil. The Joint Session of the Legislature means both the Houses of the Legislature i. e., the Legislative Assembly and Legislaive Council. Under the Constitution there shall not be less than 40 Members in the Legislative Council. If you come to the conclusion that the Legislative Council is not properly composed under Article 171 (i) of the Constitution along with the Proviso, it means that the entire Legislature is not legally composition of the Legislative Council is given under Article 171 (i) of the Constitution, which speaks thus :

> "Composition of the Legislative Council (1) The total number of members in the Legislative Council of a State having such a Council shall not exceed one third of the total number of members in the Legislative Assembly of that State ;
>
> Provided that the total number of members in the Legislative Council of a State shall in no case be less than forty."

Therefore, the Upper House is not legally composed as required under Article 17 (1) of the Constitution and that is the point of which the hon. Member Sri K. H. Patil is harping upon. There is no legally constituted or composed Legislature here since the Legislature includes both the Houses. The mandatory provision of the Article 171 (1) of the Constitution has to be complied with to constitute the Legislature here.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಪಾಟೀಲರು ಹಾಗೂ ಮಾನ್ಯ ಬಂಗಾರಪ್ಪನವರು ಏನು ವಾದವನ್ನು ಇಟ್ಟಿದ್ದಾರೆ ಅದರ ಬಗ್ಗೆ ಈಗಾಗಲೇ ಮಾನ್ಯ ಮುಖ್ಯ ಮಂತ್ರಿಯಂವರು ಉತ್ತರ ಕೊಟ್ಟಿದ್ದಾರೆ. ಕೌನ್ಸಿಲ್ ರಚನೆಯಾಗುವಾಗ ಸದಸ್ಯರ ಸಂಖ್ಯೆ ಳಿರಿ ಕ್ಕಿಂತ ಕಡಿಮೆ ಇರಬಾರದು. ಕಳೆಮನೆಯ ಸದಸ್ಯರ ಸಂಖ್ಯೆ ಏನಿದೆ ಅದರ ಮೂರನೇ ಒಂದು ಭಾಗಕ್ಕಿಂತ ಹೆಚ್ಚಿರಬಾರದು. The proviso of Article 171 (i) speaks thus :

> "Provided that the total numbers in the Legislative Council of a state shall in no case be less than forty."

Sir, the maximum and minimum strength of the House has been prescribed under this Article. The Upper House is never reconstituted. I would like the non. Members of the opposition to understand this.

ಒಂದು ಸಲ ಪ್ರಥಮದಲ್ಲಿ ಈ ಒಂದು ಲೆಜಿಸ್ಲೇಟಿವ್ ಕೌನ್ಸಿಲ್ ಇರಬೇಕು ಎಂದಂ ನಿರ್ಣಯ ಮಾಡಿದರು. ಹಾಗೆ ನಿರ್ಣಯ ಮಾಡುವಾಗ ಈ ಕೌನ್ಸಿಲ್‌ನಲ್ಲಿ ಅತಿ ಹೆಚ್ಚಿನ ಸಂಖ್ಯೆ ಎಷ್ಟು ಇರಬೇಕು ಅತಿ ಕಡಿಮೆ ಸಂಖ್ಯೆ ಎಷ್ಟು ಇರಬೇಕು ಎನ್ನುವುದರ ಬಗ್ಗೆ ನಮ್ಮ ಸಂವಿಧಾನದಲ್ಲಿ ಹೇಳಿದೆ. ಈಗ ೪೦ಕ್ಕಿಂತ ಕಡಿಮೆ ಇರಬಹುದು. ಖಾಲಿ ಇರತಕ್ಕಂಥ ಸ್ಥಾನವನ್ನು ತುಂಬುವ ವಿಚಾರ ಬೇರೆ ಪ್ರಶ್ನೆಯಾಗುತ್ತದೆ. ಸಂವಿಧಾನ ಮಾಡುವಾಗ ನಮ್ಮ ಕೌನ್ಸಿಲ್ ೪೦ ಕ್ಕಿಂತ ಕಡಿಮೆ ಇರಲಿಲ್ಲ. ೬೨ ಇತ್ತು. ಸ್ಥಳೀಯ ಸಂಸ್ಥೆಗಳ ಚುನಾವಣೆ ಬಹಳ ವರ್ಷಗಳಿಂದಲೂ ಆಗದೆ ಇರುವುದರಿಂದ ಹೆಚ್ಚಿಗೆ ಸ್ಥಾನಗಳು ಖಾಲಿ ಇವೆ. ಆದುದರಿಂದ ನಮ್ಮಲ್ಲಿ ಸ್ಪೈಂತ್ ಏನೂ ೬೨ಕ್ಕಿಂತ ಕಡಿಮೆಯಾಗಿಲ್ಲ. ನಮ್ಮಲ್ಲಿ ಸಂಖ್ಯೆ ೬೨ ಇದ್ದೇ ಇದೆ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರ ಗಮನಕ್ಕೆ ಒಂದು ವಿಷಯವನ್ನು ತರುವುದಾದರೇ ಅನೇಕ ರಾಜ್ಯಗಳಲ್ಲಿಯೂ ಸಹ ಇದೇ ಪರಿಸ್ಥಿತಿ ಇದೆ. ಬಿಹಾರ್‌ನಲ್ಲಿ ಮತ್ತೆ ಎಲ್ಲೆಲ್ಲಿ ಈ ಅಪ್ಪರ್ ಹೌಸಸ್ ಇವೆಯೋ ಅಲ್ಲೆಲ್ಲಾ ಇದೇ ಪರಿಸ್ಥಿತಿ ಇದೆ. ಕಾರಣ ಸಾಮಾನ್ಯವಾಗಿ ೧೦ ವರ್ಷಗಳಿಂದಲೂ ಕೂಡ ಈ ವಿಧಾನ ಪರಿಷತ್ತಿನಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆದಿಲ್ಲ. ತವುಗೆಲ್ಲಾ ಗೊತ್ತಿರುವ ಹಾಗೆ ನಮ್ಮ ಸರ್ಕಾರ ಬಂದಮೇಲೆ ಈ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ಮಾಡಬೇಕು ಎಂದು ಒತ್ತಾಯ ಮಾಡುತ್ತಿದ್ದೇವೆ. ಸ್ಥಾನೀಕ ಸಂಸ್ಥೆಗಳಿಗೆ ಕೊನೇ ಚುನಾವಣೆ ನಡೆದದ್ದು ೧೯೬೬ರಲ್ಲಿ. ಅಲ್ಲಿಂದ ಇಲ್ಲಿಯವರೆಗೂ ಆ ಬಗ್ಗೆ ಚುನಾವಣೆ ನಡೆದಿಲ್ಲ. ನಾವು ಈ ಖಾಲಿ ಇರುವ ಸ್ಥಾನಗಳನ್ನು ತುಂಬುವುದಕ್ಕೆ ಚುನಾವಣಾ ಕಮೀಷನರಿಗೆ ಈ ಬಗ್ಗೆ ಬರೆದಿದ್ದೇವೆ. ಈಗ ೩ ಟರ್ಮ್‌ನಿಂದಲೂ ಇದರಲ್ಲಿ ೨೧ ಸ್ಥಾನಗಳು ಖಾಲಿ ಏನು ಇವೆ ಅದನ್ನು ಆದಷ್ಟು ಜಾಗ್ರತೆಯಾಗಿ ತುಂಬುವುದಕ್ಕೆ ಚುನಾವಣಾ ಕಮಿಷನರಿಗೆ ಬರೆದಿದ್ದೇವೆ. ನಾವು ಈ ಬಗ್ಗೆ ತೆಗೆದುಕೊಂಡಂಥ ನಿರ್ಣಯಗಳು ಈ ಹಿಂದಿನ ಯಾವ ಸರ್ಕಾರಗಳೂ ಪ್ರಯತ್ನ ಮಾಡಿರಲಿಲ್ಲ. ನಮ್ಮ ಸರ್ಕಾರ ಬಂದ ಮೇಲೆ ಇದರ ಬಗ್ಗೆ ಒತ್ತಾಯ ಮಾಡುತ್ತಿದ್ದೇವೆ. ಈ ಅಪ್ಪರ್ ಹೌಸ್ ಇರಬೇಕು ಎಂದು ಒಂದು ಸಲ ಕಾನ್ಸ್‌ಟ್ಯೂಟ್ ಮಾಡಿದಮೇಲೆ ಅದನ್ನು ಮತ್ತೆ ರೀಕಾನ್ಸ್‌ಟ್ಯೂಟ್ ಮಾಡುವುದಕ್ಕೆ ಬರುವುದಿಲ್ಲ. ಬೇಕಾದರೆ ಅಪ್ಪರ್ ಹೌಸ್ ಅನ್ನು ಅಬಾಲಿಷ್ ಮಾಡಬಹುದು, ಅನ್ನುವುದನ್ನು ಮಾತ್ರ ಮಾತ್ರ ಮಾಡಬಹುದು. ಆದರಿಂದ ಈ ಅಪ್ಪರ್‌ಹೌಸ್ ಮುಂದುವರಿಯುತ್ತಾ ಇದೆ. ಈ ಕಾರಣದಿಂದ ಮಾನ್ಯ ರಾಜ್ಯಪಾಲರು ಮಾಡಿದ ಜಂಟಿ ಅಧಿವೇಶನ ಕಾನೂನಿಗೆ ಸರಿಯಾಗಿದೆ. ಈ ಬಗ್ಗೆ ಎದುರು ಪಕ್ಷದ ಮಾನ್ಯ ಸದಸ್ಯರು ಎತ್ತಿದಂಥಾ ವಾದದಲ್ಲಿ ಯಾವ ಅರ್ಥವೂ ಇಲ್ಲ ಎಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ (ಕಾರ್ಕಳ).—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಕೆ. ಎಚ್. ಪಾಟೀಲರು ಒಂದು ವಿಶೇಷವಾದಂಥ ಹಾಗೂ ಮಹತ್ವವಾದಂಥ ವಿದುಬಿದುವನ್ನು ಎತ್ತಿದ್ದಾರೆ. ಅದು ಮೇಲ್ನೋಟಕ್ಕೆ ಬಹಳ ಸರಳವಾಗಿದೆ ಎಂದು ಕಂಡರೂ ಕೂಡ ಅದರಲ್ಲಿ ಸಂವಿಧಾನಾತ್ಮಕವಾದ ಒಂದು ಪರಂಪರೆ ಎತ್ತಿ ಹಿಡಿಯುವಂಥ ಪ್ರಶ್ನೆ ಬರುವುದರಿಂದ ಈ ವಿಷಯದ ಕಡೆಗೆ ನಾವು ಗಮನ ಕೊಡಬೇಕಾಗಿದೆ. ಈ ವಿಚಾರವನ್ನು ಹಿಂದೆ ಸಭಾ ನಾಯಕರೂ ಕೂಡ ಅನೇಕ ಬಾರಿ Consciously or unconsciously he has raised this. ಈ ಬಗ್ಗೆ ಪತ್ರಿಕೆಗಳಲ್ಲೂ ಕೂಡ ಬಂದಿದೆ. ಅಲ್ಲದೆ ಈ ಸದನದಲ್ಲೂ ಈ ಪ್ರಸ್ತಾಪ ಮಾಡುವುದನ್ನು ನಾವು ಕಾಣುತ್ತಾ ಇದ್ದೇವೆ. ಆದರೆ ಆಗ ನಾವು ಅದರ ಕಡೆ ಗಮನ ಕೊಡಲಿಲ್ಲ. ಈಗ ನೋಡಿದರೆ ಈ ಒಂದು ವಿಧಾನ ಪರಿಷತ್ತು This is a truncated body. ಆದುದರಿಂದ ಈಗ ಈ ವಿಧಾನ ಪರಿಷತ್ತಿಗೆ ಚುನಾವಣೆ ಮಾಡುವುದಕ್ಕೆ ಬರುವುದಿಲ್ಲ. ಸಭಾನಾಯಕರು ಹಿಂದೆ ಈ ಒಂದು ಕಾನೂನಿನ ದೃಷ್ಟಿಯನ್ನಿಟ್ಟುಕೊಂಡು ಹೇಳಿದರೋ ಏನೋ ಗೊತ್ತಾಗಲಿಲ್ಲ. ಮಾನ್ಯ ಸದಸ್ಯರಾದ ಕೆ.ಎಚ್. ಪಾಟೀಲರು ಈ ವಿಚಾರವನ್ನು ಇಲ್ಲಿ ಎತ್ತಿದ ಮೇಲೆ ಬಹುಶಃ ಸಭಾನಾಯಕರು ಸ್ಪಷ್ಟವಾಗಿ ತಿಳಿದುಕೊಂಡಿದ್ದಾರೆ ಎಂದು ನನಗೆ ಅನಿಸಿದೆ. ಆದುದರಿಂದ ಈಗ ಈ ಪ್ರಶ್ನೆ ಉದ್ಭವವಾಗಿದೆ. 1/3 is the Minimum which is required for that house at any point of time so far as the composition of the House concernned.

Composition and Constitution are different. Constitution of the Council is from the very inception. Article 171 makes it clear about the composition of the Council. It should be composed of so many people. Suppose, it is composed of less than that, it does not contiitute a legal body. ತಾವು ಬೆಳಿಗ್ಗೆ ಇಲ್ಲಿ ಎಲ್ಲಾ ಸದಸ್ಯರನ್ನು ಗುಣಗಾನ ಮಾಡಿದ್ದೀರಿ. ಆದರಂತೆ ನಮ್ಮ ಸಂವಿಧಾನದಲ್ಲಿರತಕ್ಕಂಥ ಪರಂಪರೆಯನ್ನೂ ಉಳಿಸಿಕೊಳ್ಳಬೇಕು ಎಂದು ನಾನು ಹೇಳಂತ್ತೇನೆ. ಇದು ಒಂದು ಜಟಿಲವಾದ ಸಮಸ್ಯೆ, ಯಾವ ರಾಜ್ಯದಲ್ಲೂ ಇಂತಹ ಪ್ರಶ್ನೆ ಉದ್ಭವಿಸಿಲ್ಲ. ತಾವು ಈ ಬಗ್ಗೆ ರೂಲಿಂಗ್ ಕೊಡಬೇಕು. ಈ ಒಂದು ಪ್ರಶ್ನೆ ಇತ್ಯರ್ಥವಾಗುವವರೆಗೆ ಕಾರ್ಯದರ್ಶಿಯವರು ಸಭೆಯ ಮುಂದೆ ಇಡತಕ್ಕಂಥ ವರದಿಯನ್ನು ಸ್ವಲ್ಪ ಮುಂದುವರಿಸಿದರೆ ಅದರಿಂದ ಏನೂ ದೊಡ್ಡ ಅನಾಹುತವಾಗುವುದಿಲ್ಲ. ಹೇಗಾದರೂ ಕೂಡ ಅಡ್ವೋಕೇಟ್ ಜನರಲ್‌ರವರು ಈ ಮನೆಯ ಸದಸ್ಯರಾಗಿದ್ದಾರೆ. ಅವರನ್ನು ಇಲ್ಲಿಗೆ ಕರೆಯಿಸಿ ಅವರು ಈ ಬಗ್ಗೆ ಒಂದು ಹೇಳಿಕೆ ಕೊಡಲಿ. ಅದನ್ನು ನಾವು ಸ್ವೀಕಾರ ಮಾಡೋಣ. ಸಂವಿಧಾನ ಬದ್ಧವಾದ ಉಜ್ವಲ ಪರಂಪರೆಯ ಬಗ್ಗೆ ಇಂತಹ ಪ್ರಶ್ನೆ ಬಂದಾಗ ಸರಿಯಾದ ರೀತಿ ವಿಚಾರ ಮಾಡೋಣ. ಮಾನ್ಯ ಅಧ್ಯಕ್ಷರೇ, ಈ ಒಂದು ಪ್ರಶ್ನೆಯನ್ನು ಎತ್ತಿ ಹಿಡಿದವರು ಧಾರವಾಡ ಜಿಲ್ಲೆಯಿಂದ ಬಂದಂಥ ಮಾನ್ಯ ಸದಸ್ಯರು. ತಾವೂ ಕೂಡ ಧಾರವಾಡ ಜಿಲ್ಲೆಗೆ ಸೇರಿದವರಾಗಿದ್ದೀರಿ. ಈ ಬಗ್ಗೆ ತಾವು ಹಿಂದು ಮುಂದು ನೋಡಬಾರದು. If it is a question of interpretation of law. You should not hestitate. ಆದುದರಿಂದ ಕಾರ್ಯದರ್ಶಿಯವರು ಸಭೆಯ ಮುಂದಿಡತಕ್ಕಂಥ ವರದಿಯನ್ನು ಈ ಸಮಸ್ಯೆ ಇತ್ಯರ್ಥವಾಗುವವರೆಗೆ ಮುಂದುವರಿಸಿದರೆ ಅದರಿಂದ ದೊಡ್ಡ ಅನಾಹುತ ಏನೂ ಆಗುವುದಿಲ್ಲ. ನಾಳೆಯೇ ಅಡ್ವೋಕೇಟ್ ಜನರಲ್‌ರವರನ್ನು ಕರೆಯಿಸಿ ವಿಚಾರ ಮಾಡುವ ಹಾಗೆ ತಾವು ತೀರ್ಮಾನ ತೆಗೆದುಕೊಳ್ಳಬೇಕು ಎಂದು ಹೇಳಂತ್ತೇನೆ.

ಅಧ್ಯಕ್ಷರು.—ವಿಚಾರ ಮಾಡುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ವಿಚಾರದಲ್ಲಿ ಅಂತಹ ಗಹನವಾದ ವಿಚಾರವೂ ಇಲ್ಲ, ಅಂತಹ ಸೂಕ್ಷ್ಮವಾದ ವಿಚಾರವೂ ಇಲ್ಲ. ಈ ಬಗ್ಗೆ ಅಡ್ವೋಕೇಟ್ ಜನರಲ್‌ರವರನ್ನು ಕರೆಯಿಸತಕ್ಕಂಥ ವಿಚಾರವೂ ಬರುವುದಿಲ್ಲ. ಅವರು ಇನ್ನೊಂದು ಸಲ ಇದರಲ್ಲಿರತಕ್ಕಂಥ ಒಕ್ಕಣೆಯನ್ನು ನೋಡಲಿ. ಅದರಲ್ಲಿ ಈ ರೀತಿ ಇದೆ :—

> "The total number of Members in the Legislative Council of a State, having such a Council, shall no exceed1/3 of the total number of Members in the Legislative Assembly of that State. It is the maximum, provided that the total number of Members in the Legislative Council of a State shall be, in no case, less than, 40." ಎಂದು ಇದೆ.

ಹಾಗಿರುವುದರಿಂದ ಈಗ ಯಾವ ರಾಜ್ಯದಲ್ಲೂ ಕೂಡ ೨೫೫ ಜನ ಸದಸ್ಯರನ್ನೊಳಗೊಂಡಂತೆ ಒಂದು ಕೌನ್ಸಿಲ್ ಅನ್ನು ಮಾಡುವುದಕ್ಕಾಗುವುದಿಲ್ಲ. ಮೊದಲೇ ಟೋಟಲ್ ಎನ್ನುವ ಶಬ್ದವನ್ನು ಬಿಡಬಹುದಾಗಿತ್ತಲ್ಲವೇ ? ಹಾಗೆ ಮಾಡಲಿಲ್ಲ. ಈಗ ತಾವು ಇದರಲ್ಲಿ "ಟೋಟಲ್" ಎನ್ನುವ ಪದವನ್ನು ಬಿಟ್ಟು ಓದಿದರೆ ಅದಕ್ಕೆ ಅರ್ಥವೇ ಇಲ್ಲ. ಆದುದರಿಂದ ಮಾನ್ಯ ಸದಸ್ಯರಾದ ಶ್ರೀ ಕೆ. ಹೆಚ್. ಪಾಟೀಲರು ತಂದಿರತಕ್ಕಂಥ ಇದರ ಒಕ್ಕಣೆಯನ್ನು ಮೊದಲೇ ಚೆನ್ನಾಗಿ ಓದಿ ತಿಳಿದುಕೊಂಡಿದ್ದರೆ ಈಗ ಈ ವಿಧಬಿಂದುವನ್ನು ಎತ್ತಬೇಕಾದ ಪ್ರಮೇಯವೇ ಬರುತ್ತಿರಲಿಲ್ಲ.

ಕೆ–೧೦ ಪಿ.ಎಂ.

ಟೋಟಲ್ ನಂಬರ್ ಆಫ್ ಮೆಂಬರ್ಸ್ ವಿಚಾರದಲ್ಲಿ ಯಾವುದೇ ಸ್ಟೇಟ್ ಆದರೂ ಲೆಜಿಸ್ಲೇಟೀವ್ ಕೌನ್ಸಿಲ್ ಇರಬೇಕೆಂದು ನಿರ್ಧಾರ ಮಾಡಿದರೆ ಕನಿಷ್ಟ ಪಕ್ಷ ೪೦ ಆದರೂ ಇರಬೇಕು. ೨೫೫ಕ್ಕಿಂತಲೂ ಕಡಿಮೆ ಆಗುವುದಿಲ್ಲ, ಅಷ್ಟೆ ಇದರಲ್ಲಿ ಇರತಕ್ಕ ವಿಚಾರ.

ಶ್ರೀ ಕೆ. ಹೆಚ್. ಪಾಟೀಲ್.—ಅಧ್ಯಕ್ಷರೆ, ಮಾನ್ಯ ನಾಯಕರು ಮಾತನಾಡುತ್ತಾ ಟೋಟಲ್ ನಂಬರ್ ವಿಚಾರ ಹೇಳಿದರು. ಈಗ ನಮ್ಮ ಕೌನ್ಸಿಲ್‌ನಲ್ಲಿ ೪೦ಕ್ಕಿಂತಲೂ ಕಡಿಮೆ ಆಗಿದೆ. ಆದ್ದರಿಂದ ನಾನು ಆ ವಿಚಾರ ಹೇಳುತ್ತಿದ್ದೇನೆ, ನಾಳೆ ದಿವಸ ಎಲ್ಲರೂ ರಾಜೀನಾಮೆ ಕೊಟ್ಟು ಮಾನ್ಯ ಹೆಗಡೆಯವರು ಒಬ್ಬರೇ ಉಳಿದರೆ ಸದನ ನಡೆಯಬೇಕೆಂದು ಹೇಳಲಿಕ್ಕೆ ಆಗುತ್ತದೆಯೇ ? ಟೋಟಲ್ ನಂಬರ್ ಇದ್ದರೂ ಅದರಲ್ಲಿ ಎಷ್ಟು ಜನರು ಇರಬೇಕೆಂದು ಒಂದು ಸ್ಟ್ರಂಗ್ತ್‌ನ್ನು ಸಂವಿಧಾನದಲ್ಲಿ ನಮೂದಿಸಿರುತ್ತಾರೆ. ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿನಲ್ಲಿಯಾಗಲಿ, ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯಲ್ಲಾಗಲೀ, ೬ ಜನರಿಗಿಂತಲೂ ಕಡಿಮೆ ಇರಬಾರದು. ೧೦ ಜನರಿಗಿಂತಲೂ ಜಾಸ್ತಿ ಇರಬಾರದು ಎಂದು ಒಂದು ನಿಯಮ ಇದೆ. ಕೆಲವೊಂದು ಸಾರಿ ಕಡಿಮೆ ಜನರು ಸೇರಿ ತೆಗೆದುಕೊಂಡಿರತಕ್ಕ ಪ್ರೊಸೀಡಿಂಗ್ಸ್ ಬಗ್ಗೆ ಹೈಕೋರ್ಟಿಗೆ ಹೋಗಿ ಡಿಸಿಷನ್ ಆಗಿರತಕ್ಕ ವಿಚಾರಗಳು ಇವೆ. ಪ್ರೊಸೀಡಿಂಗ್ಸ್ ರದ್ದು ಆಗಿರತಕ್ಕ ವಿಚಾರಗಳು ಇವೆ. ಆದೇ ರೀತಿಯ ಒಕ್ಕಣೆ ಇಲ್ಲೇ ಇದೆ. ಇಲ್ಲಿಯವರೆಗೂ ಈ ತರಹ ಆಗಿರಲಿಲ್ಲ. ಈಗ ಕೌನ್ಸಿಲ್ ಮೆಂಬರ್ ಸಂಖ್ಯೆ ಹಿಡಿಕ್ಕೆ ಇಳಿದು ಬಂದಿದೆ, ಇದರ ಬಗ್ಗೆ ಮಾನ್ಯ ಸದಸ್ಯರಾದ ಬೊಮ್ಮಾಯಿಯವರು ವಾದ ತಪ್ಪು ಎಂದು ಹೇಳುವುದಿಲ್ಲ. ಕಾನ್‌ಸ್ಟಿಟ್ಯೂಷನ್ ಇದ್ದ ಹಾಗೆ ನೋಡೋಣ. ನಾವು, ನೀವು ಇಬ್ಬರೂ ಕಾನ್‌ಸ್ಟಿಟ್ಯೂಷನ್‌ಗೆ ಗೌರವ ಕೊಟ್ಟು ಕೊಂಡು ಹೋಗೋಣ. ಈಗ ತಾನೇ ನಾವು ಪ್ರತಿಜ್ಞೆಯನ್ನು ತೆಗೆದುಕೊಂಡಿದ್ದೇವೆ. ಇದು ಆಗಲಿಕ್ಕೆ ಯಾವ ಪಕ್ಷದ ತಪ್ಪೇ ಇರಲಿ, ಅಲ್ಲಿಯ ಸಂಖ್ಯೆ ಹಿಡಿ ಇದ್ದಾಗ ಸಭೆಯನ್ನು ನಡೆಸಲಿಕ್ಕೆ ಬರುವುದಿಲ್ಲ. ಅದಕ್ಕೆ ಒಂದು ಕಲರ್ ಕೊಟ್ಟು ನಡೆಸುವುದು ಬೇಡ. ಅಸೆಂಬ್ಲಿ ಏತಕ್ಕೆ ಹಾಗೆ ಆಗಲಿಲ್ಲ ಅಂದರೆ ಇದು ಪರಪೆಚ್ಯುಯಲ್ ಬಾಡಿ. ಕಾನ್‌ಸ್ಟಿಟ್ಯೂಷನ್ ಫ್ರೇಮರ್ಸ್ ನಮ್ಮ ಹಾಗೆ ಅಲ್ಲ, ವಿಚಾರ ಮಾಡಿ ತೀರ್ಮಾನ ಮಾಡಿರುತ್ತಾರೆ. ಪ್ರತಿಯೊಂದು ವಿಚಾರ ಮಾಡಿ ಟೋಟಲ್ ಸ್ಟ್ರೆಂತ್ ೩೦ ಕ್ಕಿಂತಲೂ ಕಡಿಮೆ ಆಗಬಾರದು, ಕಡಿಮೆ ಆದರೆ ಆಗ ಸರಿಯಾಗುವುದಿಲ್ಲ ಎಂದು ಹೇಳಿದ್ದಾರೆ. ಈಗ ಮೇಲ್ಮನೆಯಲ್ಲಿ ೪೦ಕ್ಕಿಂತಲೂ ಕಡಿಮೆ ಸ್ಟ್ರೆಂತ್ ಆಗಿರುವುದರಿಂದ. ಅದನ್ನು ರದ್ದು ಮಾಡಲಿಕ್ಕೆ ಬರುವುದಿಲ್ಲ. ೪೦ ಸ್ಟ್ರೆಂತ್ ಆಗುವವರೆಗೂ ಎಲೆಕ್ಷನ್ ಮಾಡಿ, ಆಗ ಆದಕ್ಕೆ ವ್ಯಾಲ್ಲಿಡಿಟಿ ಬರುತ್ತದೆ. ಅನಂತರ ಜಾಯಿಂಟ್ ಸೆಷನ್ ಮಾಡೋಣ,

ಶ್ರೀ ಜಿ. ಹೆಚ್. ಪಟೇಲ್.—ಅಧ್ಯಕ್ಷರೆ, ನಾನು ಮತ್ತೆ ಓದಬೇಕಾಯಿತು.

"Provided that the total number of members in the Legislative Council of a State shall in no case be less than forty."

ಕೆಳಗಿನ ಸದನದ ಸಂಖ್ಯೆ ಮೂರನೇ ಒಂದು ಭಾಗಕ್ಕಿಂತಲೂ ಹೆಚ್ಚು ಇರಬೇಕು, ೪೦ ಕ್ಕಿಂತಲೂ ಕಡಿಮೆ ಇರಬಾರದು ಎಂದು ಏತಕ್ಕೆ ಹೇಳಿದ್ದಾರೆ ಎಂದರೆ, ಅಸೆಂಬ್ಲಿಯಲ್ಲಿ ೧೨೦ ಸಂಖ್ಯೆಗಿಂತಲೂ ಕಡಿಮೆ ಇದ್ದರೆ. ಆ ಸ್ಟೇಟ್‌ನಲ್ಲಿ ಕೌನ್ಸಿಲ್ ಮಾಡುವ ಹಾಗೆ ಇಲ್ಲ. ೧೨೦ ಸಂಖ್ಯೆಗಿಂತಲೂ ಅಸೆಂಬ್ಲಿಯಲ್ಲಿ ಸಂಖ್ಯೆ ಕಡಿಮೆ ಇದ್ದರೆ, ಆ ಸ್ಟೇಟ್‌ನಲ್ಲಿ ಲೆಜಿಸ್ಲೇಟಿವ್ ಕೌನ್ಸಿಲ್ ಲಕ್ಷುರಿ ಬೇಡ ಎನ್ನುವುದು ಇದರ ಉದ್ದೇಶ. Article 172 (2) says :

"The Legislative Council of a State shall not be subject to dissolution."

ಎಂದರೆ ಏನೂ ಮಾಡಲಿಕ್ಕೆ ಬರುವುದಿಲ್ಲ. ಆದ್ದರಿಂದ, ಈ ಅಬ್ಜಕ್ಷನ್ ಕೆಲಸಕ್ಕೆ ಬರುವುದಿಲ್ಲ. ಅದನ್ನು ತಳ್ಳಿಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

SRI R. VENKATARAMAIAH.— Article 171 is clear. The proviso reads :

"Provided that the total number of members in the Legislative Council of a State shall in no case be less than forty."

ತಾವು ಹೇಳಂವ ರೀತಿ ಆಗಿದ್ದರೆ ಅಲ್ಲಿ ಇನ್ನೊಂದು ಕ್ಲಾಸ್‌ನ್ನು ಆ್ಯಡ್ ಮಾಡುತ್ತಿದ್ದರು. ಅಂಥಾದ್ದು ಇಲ್ಲವೇ ಇಲ್ಲ, ಆದ್ದರಿಂದ ಮಾನ್ಯ ಸದಸ್ಯರು ಹೇಳಿದ್ದಕ್ಕೆ ತಿರುಳಿಲ್ಲ. ಈಗ ಇರತಕ್ಕಂಥ ೧೭೨ (೨) ರಲ್ಲಿ ಕ್ಲಿಯರ್ ಆಗಿದೆ. ಅವರ ವಾದ ಸರಿಯಾಗಿಲ್ಲ, ಸುಮ್ಮನೆ ಒಂದು ತಕರಾರು ಎತ್ತಿ ಹೇಳಿದ್ದಾರೆ.

ಶ್ರೀ ಬಿ. ಟಿ. ಕೋಳಿವಾಡ್.— ಕೌನ್ಸಿಲ್‌ನಲ್ಲಿ ಕನಿಷ್ಟ ೪೦ ಸದಸ್ಯರು ಇರಲೇಬೇಕು. ಈಗ ಮಾತನಾಡುತ್ತಿರುವುದು ಕಾಂಪೊಸಿಷನ್ ಬಗ್ಗೆ. ಕಾನ್‌ಸ್ಟಿಟ್ಯೂಷನ್ ಬಗ್ಗೆ ಅಲ್ಲ ಎಂದು ತಿಳಿದು ಕೊಳ್ಳಬೇಕು. "In no case" means "at no time" also. Under any circumstances it should not be less than 40. When article 171 is in force, it means the number of Council members should not be less than 40. Therefore, the hon. Speaker can give proper ruling.

SRI RAMESH KUMAR.— "In no case" means "At no time", is according to Koliwad's constitution. According to Indian Constituion, it means only "in no case".

ಶ್ರೀ ಎಂ. ರಘುಪತಿ.—ಮಾನ್ಯ ಸದಸ್ಯರು ಸರಿಯಾಗಿ ಅರ್ಥ ಮಾಡಿಕೊಂಡ ಹಾಗೆ ಕಾಣಲಿಲ್ಲ. ಆ ಸದನ ರಚನೆಯಾಗುವ ಸಂದರ್ಭದಲ್ಲಿ ಮಾತ್ರ ಮೂರನೆಯ ಒಂದು ಭಾಗ ಇರಬೇಕು ೪೦ ಸಂಖ್ಯೆಗಿಂತಲೂ ಕಡಿಮೆ ಇರಬಾರದು ಎಂದು ಇದೆ. ಈಗಾಗಲೇ ಸಂವಿಧಾನ ರಚನೆಯಾಗಿ ೩೫ ವರ್ಷಗಳಾಗಿವೆ ಅಸ್ಸಾಂನಲ್ಲಿ ೧೮೦ ಸಂಖ್ಯೆಗಿಂತಲೂ ಕಡಿಮೆ ಸದಸ್ಯರು ಇರುವುದರಿಂದ ಅಲ್ಲಿ ಕೌನ್ಸಿಲ್ ಇಲ್ಲ ಹಾಗೆ ಪಾಂಡಿಚೇರಿಯಲ್ಲಿ ೩೫ ಜನ ಸದಸ್ಯರು ಇರುವುದರಿಂದ ಅಲ್ಲಿಯೂ ಸಹ ಕೌನ್ಸಿಲ್ ಇಲ್ಲ ಅದಕ್ಕೋಸ್ಕರ ಈ ಪ್ರಾವಿಜನ್ ಇದೆ. ಆಲ್ ದಿ ಟೈಮ್ ಸದಸ್ಯರ ಸಂಖ್ಯೆ ೪೦ ಇರಲೇಬೇಕು ಎನ್ನುವುದರ ಬಗ್ಗೆ ಪ್ರಾವಿಜನ್ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಪಾಟೀಲ್‌ರವರ ವಾದವನ್ನು ತೆಗೆದುಕೊಂಡರೆ, ಮೇಲ್ಮನೆಯಲ್ಲಿ ೪೦ ಜನ ಸದಸ್ಯರಿಗಿಂತಲೂ ಕಡಿಮೆ ಆದರೆ ಆ ಸಂದರ್ಭದಲ್ಲಿ ಏನಾಗುತ್ತದೆ. ಆ ಮನೆಯನ್ನು ವಿಸರ್ಜಿಸಬೇಕೆಂದು ಅಭಿಪ್ರಾಯವೇ ? ವಿಸರ್ಜಿಸಲಿಕ್ಕೆ ಸಾಧ್ಯವೇ ? ಸಂವಿಧಾನಕ್ಕನುಗುಣವಾಗಿ ನೋಡಿದರೆ ವಿಸರ್ಜಿಸಲಿಕ್ಕೆ ಸಾಧ್ಯವಿಲ್ಲ. ಈಗ ಕೌನ್ಸಿಲ್‌ನಲ್ಲಿ ಕಡಿಮೆ ಸಂಖ್ಯೆ ಇದ್ದರೆ ಲೀಗಲಿ ನಾಟ್ ಕಾನ್‌ಸ್ಟಿಟ್ಯೂಟೆಡ್ ಎಂದರೆ ಅದರ ಅರ್ಥ ಸರಿಯಾಗುವುದಿಲ್ಲ. "In no case" cannot become "at no time". If the strength becomes less than forty at a particular point of time, how can you dissolve that House? If his argument is accepted, you will have to dissolve it. But you cannot dissolve. So his argument fails. It has no force.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ಅವರ ವಾದವನ್ನು ಒಪ್ಪಿದರೆ ಆಗತಕ್ಕ ಪರಿಣಾಮ ಏನು ಎಂದರೆ ಕೌನ್ಸಿಲ್‌ನ್ನು ವಿಸರ್ಜನೆ ಮಾಡಬೇಕು. ಕಾನೂನು ಪ್ರಕಾರ ಜಾಯಿಂಟ್ ಸೆಷನ್ ಕರೆಯಬೇಕಾಗುತ್ತದೆ. ಮೇಲ್ಮನೆ ಅಸ್ತಿತ್ವದಲ್ಲಿರುವುದರಿಂದ ಜಾಯಿಂಟ್ ಸೆಷನ್ ಕರೆಯಬೇಕಾಗುತ್ತದೆ. ಅಲ್ಲದೆ, ೬ ತಿಂಗಳಲ್ಲಿ ಕರೆಯಬೇಕಾದಂಥ ಒಂದು ನಿಯಮವನ್ನು ಪಾಲಿಸಬೇಕಾಗುತ್ತದೆ. ಈ ಮನೆಯಲ್ಲಿ ಪಾಸ್ ಮಾಡಿದಂಥ ಬಿಲ್ಲುಗಳನ್ನು ಆ ಮನೆಯಲ್ಲಿ ಪಾಸ್ ಮಾಡಬೇಕಾದ್ದೂ ಇರುತ್ತದೆ. ಇದು ಎಲ್ಲಾ ಕಾನ್‌ಸಿಕ್ವೆನ್ಸ್ ನೋಡಿದರೆ ರಚನೆ ಮಾಡುವಾಗ ಮಾತ್ರ ನಂಬರ್ ಬೇಕಾಗುತ್ತದೆ ಅಷ್ಟೆ. ಇಲ್ಲದೇ ಇದ್ದರೆ ಡೆಡ್‌ಲಾಕ್ ವಿಲ್ ಬಿ ಕ್ರಿಯೇಟೆಡ್. ಅನೇಕ ರಾಜ್ಯಗಳಲ್ಲಿ ಕಡಿಮೆ ಸಂಖ್ಯೆ ಆಗಿದೆ. ಪ್ರುಸ್ಕ್ರೈಬ್ಡ್ ಸಂಖ್ಯೆಗಿಂತಲೂ ಬಿಹಾರ್‌ನಲ್ಲಿ ಕಡಿಮೆ ಇದೆ, ಅದರ ಕಾನ್‌ಸಿಕ್ವೆನ್ಸ್ ಏನೂ ಆಗುವುದಿಲ್ಲ. ಕಾನ್‌ಸ್ಟಿಟ್ಯೂಷನ್‌ನಲ್ಲಿ ಬಹಳ ಕ್ಲೀಯರ್ ಆಗಿದೆ. Every provision of the Constitution must be followed. When that House is existing, joint Session must be called and other constitutional procedures should be followed. ಅದಕ್ಕೆ ಅವರ ವಾದದಲ್ಲಿ ಯಾವ ತತ್ವವೂ ಇಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅಧ್ಯಕ್ಷರು.— ನಾನು ಮಾನ್ಯ ಸಚಿವರಾದ ಪಟೀಲರ ವಾದವನ್ನೂ ಕೇಳಿದ್ದೇನೆ ಮಾನ್ಯ ವಿರೋಧ ಪಕ್ಷದ ಮುಖಂಡರುಗಳು ಹೇಳಿದ್ದನ್ನೂ ಕೇಳಿದ್ದೇನೆ. ಮಾನ್ಯ ಮುಖ್ಯ ಮಂತ್ರಿಯವರು ಹೇಳಿದ್ದನ್ನು ಕೇಳಿದ್ದೇನೆ. ಜಂಟೀ ಅಧಿವೇಶನವನ್ನೂ ಕರೆದು ರಾಜ್ಯಪಾಲರು ತಮ್ಮ ಭಾಷಣವನ್ನು ಮಾಡಿಯಾಗಿದೆ. ಈ ಸಂದರ್ಭದಲ್ಲಿ ವಿಧಾನ ಪರಿಷತ್ತು ಕಾನೂನು ಬದ್ಧವಾಗಿಲ್ಲವೆಂದು ಹೇಳುವುದು ಸರಿಯಲ್ಲ. ಆದಕ್ಕೆ ಸಂದರ್ಭವೇ ಬೇರೆಯಿರುವುದರಿಂದ, ತಮ್ಮ ವಾದ ಅಪ್ರಸ್ತುತವಾಗಿದೆಯೆಂದು ತಮ್ಮ ಪಾಯಿಂಟ್ ಆಫ್ ಆರ್ಡರನ್ನು ತಳ್ಳಿಹಾಕಿದ್ದೇನೆ.

ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿ.— ಸ್ವಾಮಿ, ರಾಜ್ಯಪಾಲರು ಮಾಡಿದ ಭಾಷಣದ ಪ್ರತಿಯನ್ನು ಸಭೆಯ ಮುಂದಿಡುತ್ತೇನೆ. ಹಾಗೂ ಕಳೆದ ಅಧಿವೇಶನದಲ್ಲಿ ವರದಿಯನ್ನೊಪ್ಪಿಸಿದ ನಂತರ ರಾಜ್ಯಪಾಲರಿಂದ ಅಥವಾ ರಾಷ್ಟ್ರಾಧ್ಯಕ್ಷರಿಂದ ಸಂದರ್ಭಾನುಸಾರ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ರಾಜ್ಯಪಾಲರು ಅಥವಾ ರಾಷ್ಟ್ರಾಧ್ಯಕ್ಷರವರಿಂದ ಒಪ್ಪಿಗೆಯನ್ನು ಪಡೆದ ವಿಧೇಯಕಗಳ ವಿವರಣಾ ಪಟ್ಟಿ.

ಕ್ರಮ ಸಂಖ್ಯೆ	ವಿಧೇಯಕದ ಹೆಸರು	ಒಪ್ಪಿಗೆಯನ್ನು ಪಡೆದ ದಿನಾಂಕ	ಒಪ್ಪಿಗೆಯನ್ನು ನೀಡಿದವರು
೧	೨	೩	೪
೧	೧೯೮೧ನೇ ಇಸವಿಯ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ತಿದ್ದುಪಡಿ) ವಿಧೇಯಕ.	೨೯-೯-೧೯೮೧	ರಾಜ್ಯಪಾಲರು
೨	೧೯೭೬ನೇ ಇಸವಿಯ ಕರ್ನಾಟಕ ಮದುವೆಗಳಿಗೆ (ನೋಂದಣಿ ಮತ್ತಿತರ ಅಪಕಾಶಗಳ) ಸಂಬಂಧಿಸಿದ ವಿಧೇಯಕ	೧೫-೭-೧೯೮೩	ರಾಷ್ಟ್ರಾಧ್ಯಕ್ಷರು
೩	೧೯೮೨ನೇ ಇಸವಿಯ ಕರ್ನಾಟಕ ದೇವದಾಸಿಗಳ (ಸಮರ್ಪಣಾ ನಿಷೇಧ) ವಿಧೇಯಕ	೧೧-೧-೧೯೮೪	ಮೇಲಿನಂತೆ
೪	೧೯೮೪ನೇ ಇಸವಿಯ ಕರ್ನಾಟಕ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಆದಿಮ ಜಾತಿಗಳಿಗೆ ಸಂಬಂಧಿಸಿದ ಕೆಲವು ಜಮೀನುಗಳ ವರ್ಗಾವಣೆಯ ನಿಷೇಧ (ತಿದ್ದುಪಡಿ) ವಿಧೇಯಕ	೨೯-೨-೧೯೮೪	ರಾಜ್ಯಪಾಲರು
೫	೧೯೮೫ನೇ ಇಸವಿಯ ಕರ್ನಾಟಕ ಹಣ ವಿನಿಯೋಗಕ್ಕೆ ಸಂಬಂಧಿಸಿದ ವಿಧೇಯಕ	೭-೩-೧೯೮೫	ಮೇಲಿನಂತೆ
೬	೧೯೮೫ನೇ ಇಸವಿಯ ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕ	೧೭-೩-೧೯೮೫	ಮೇಲಿನಂತೆ
೭	೧೯೮೫ನೇ ಇಸವಿಯ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕ	೧೭-೩-೧೯೮೫	ಮೇಲಿನಂತೆ

೧	೨	೩	೪
೮	೧೯೮೪ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ	೩೧-೩-೧೯೮೪	ಮೇಲಿನಂತೆ
೯	೧೯೮೪ನೇ ಇಸವಿಯ ಕರ್ನಾಟಕ ರಾಜ್ಯದ ವಿಶ್ವ ವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ	೭-೪-೧೯೮೪	ಮೇಲಿನಂತೆ
೧೦	೧೯೮೪ನೇ ಇಸವಿಯ ಕರ್ನಾಟಕ ಅರಣ್ಯ (ತಿದ್ದುಪಡಿ) ವಿಧೇಯಕ	೧೧-೪-೧೯೮೪	ಮೇಲಿನಂತೆ
೧೧	೧೯೮೪ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆಗೆ ಸಂಬಂಧಿಸಿದ (ತಿದ್ದುಪಡಿ) ವಿಧೇಯಕ	೧೩-೪-೧೯೮೪	ಮೇಲಿನಂತೆ
೧೨	೧೯೮೩ನೇ ಇಸವಿಯ ಕರ್ನಾಟಕ ರಾಜ್ಯದ ನೌಕರರ (ವಯಸ್ಸಿನ ನಿರ್ಧಾರ) (ತಿದ್ದುಪಡಿ) ವಿಧೇಯಕ	೭-೪-೧೯೮೪	ಮೇಲಿನಂತೆ
೧೩	೧೯೮೩ನೇ ಇಸವಿಯ ಕರ್ನಾಟಕ ಸಚಿವರುಗಳ ಸಂಬಳ ಮತ್ತು ಭತ್ಯಗಳ (ತಿದ್ದುಪಡಿ) ವಿಧೇಯಕ	೧೭-೪-೧೯೮೪	ಮೇಲಿನಂತೆ
೧೪	೧೯೮೩ನೇ ಇಸವಿಯ ಕರ್ನಾಟಕ ಅಭಿವೃದ್ಧಿ ಮಂಡಳಿಗಳ (ತಿದ್ದುಪಡಿ) ವಿಧೇಯಕ	೧೭-೪-೧೯೮೪	ಮೇಲಿನಂತೆ
೧೫	೧೯೮೩ನೇ ಇಸವಿಯ ಕರ್ನಾಟಕ ನ್ಯಾಯಾಲಯಗಳ ಶುಲ್ಕ ಹಾಗೂ ಮೊಕದ್ದಮೆಗಳ ಮೌಲ್ಯ ನಿರ್ಣಯ (ತಿದ್ದುಪಡಿ) ವಿಧೇಯಕ	೧೭-೪-೧೯೮೪	ರಾಜ್ಯಪಾಲರು
೧೬	೧೯೮೪ನೇ ಇಸವಿಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ತಿದ್ದುಪಡಿ) ವಿಧೇಯಕ	೧೭-೪-೧೯೮೪	ಮೇಲಿನಂತೆ
೧೭	೧೯೮೩ನೇ ಇಸವಿಯ ಕರ್ನಾಟಕ ಖಾಲಿ ಜಾಗಗಳನ್ನು ವಿರೂಪುಗೊಳಿಸುವುದನ್ನು ತಡೆಗಟ್ಟುವುದಕ್ಕೆ ಸಂಬಂಧಿಸಿದ (ತಿದ್ದುಪಡಿ) ವಿಧೇಯಕ	೧೭-೪-೧೯೮೪	ಮೇಲಿನಂತೆ
೧೮	೧೯೮೩ನೇ ಇಸವಿಯ ಬೆಂಗಳೂರಿನ ನೀರು ಸರಬರಾಜು ಮತ್ತು ಒಳಚರಂಡಿ (ತಿದ್ದುಪಡಿ) ವಿಧೇಯಕ	೧೭-೪-೧೯೮೪	ಮೇಲಿನಂತೆ
೧೯	೧೯೮೪ನೇ ಇಸವಿಯ ಕರ್ನಾಟಕ ಸಾದಿಲ್ವಾರು ನಿಧಿ (ತಿದ್ದುಪಡಿ) ವಿಧೇಯಕ	೨೧-೪-೧೯೮೪	ಮೇಲಿನಂತೆ
೨೦	೧೯೮೪ನೇ ಇಸವಿಯ ಕರ್ನಾಟಕ ರೇಷ್ಮೆ ಹುಳುಗೂಡು ಹಾಗೂ ರೇಷ್ಮೆ ನೂಲು (ಉತ್ಪಾದನೆ) ಸರಬರಾಜು ವಿತರಣೆ ಹಾಗೂ ಮಾರಾಟ ನಿಯಂತ್ರಣ (ತಿದ್ದುಪಡಿ) ವಿಧೇಯಕ	೨೧-೪-೧೯೮೪	ಮೇಲಿನಂತೆ
೨೧	೧೯೮೪ನೇ ಇಸವಿ ಕರ್ನಾಟಕ ವಿಧಾನ ಮಂಡಲದ ವೇತನ, ವಿಶ್ರಾಂತಿ ವೇತನಗಳು ಭತ್ಯಗಳು (ತಿದ್ದುಪಡಿ) ವಿಧೇಯಕ	೨೩-೪-೧೯೮೪	ಮೇಲಿನಂತೆ
೨೨	೧೯೮೪ನೇ ಇಸವಿಯ ಕರ್ನಾಟಕ ಇನಾಂ ರದ್ದತಿ ಕಾನೂನುಗಳ (ತಿದ್ದುಪಡಿ) ವಿಧೇಯಕ	೨೬-೪-೧೯೮೪	ಮೇಲಿನಂತೆ

೧	೨	೩	೪
೨೩	೧೯೮೪ನೇ ಇಸವಿಯ ಕರ್ನಾಟಕ ಕಂದಾಯ (ತಿದ್ದುಪಡಿ) ವಿಧೇಯಕ	೨೬-೪-೧೯೮೪	ಮೇಲಿನಂತೆ
೨೪	೧೯೮೪ನೇ ಇಸವಿಯ ಕರ್ನಾಟಕ ವಿದ್ಯುಚ್ಛಕ್ತಿ ಬಳಕೆಯ ಮೇಲೆ ವಿಧಿಸುವ ತೆರಿಗೆಗೆ ಸಂಬಂಧಿಸಿದ (ತಿದ್ದುಪಡಿ) ವಿಧೇಯಕ	೨೬-೪-೧೯೮೪	ಮೇಲಿನಂತೆ
೨೫	೧೯೮೪ನೇ ಇಸವಿಯ ಕರ್ನಾಟಕ ಕೃಷಿ ಸಾಲದ ಕಾರ್ಯಾಚರಣೆ ಹಾಗೂ ಇತರ ಅವಕಾಶಗಳಿಗೆ ಸಂಬಂಧಿಸಿದ (ತಿದ್ದುಪಡಿ) ವಿಧೇಯಕ	೨೬-೪-೧೯೮೪	ಮೇಲಿನಂತೆ
೨೬	೧೯೮೩ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ	೩೦-೪-೧೯೮೪	ರಾಜ್ಯಪಾಲರು
೨೭	೧೯೮೪ನೇ ಇಸವಿಯ ಕರ್ನಾಟಕ ಗ್ರಾಮಾಂತರ ಕಛೇರಿಗಳ ರದ್ದತಿ (ತಿದ್ದುಪಡಿ) ವಿಧೇಯಕ	೩೦-೪-೧೯೮೪	ಮೇಲಿನಂತೆ
೨೮	೧೯೮೪ನೇ ಇಸವಿಯ ಕರ್ನಾಟಕ ನಿರ್ದಿಷ್ಟಪಡಿಸಿದ ಇನಾಂಗಳ ರದ್ದತಿ (ತಿದ್ದುಪಡಿ) ವಿಧೇಯಕ	೫-೫-೧೯೮೪	ಮೇಲಿನಂತೆ
೨೯	೧೯೮೪ನೇ ಇಸವಿಯ ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಸಂಬಂಧಿಸಿದ (ತಿದ್ದುಪಡಿ) ವಿಧೇಯಕ	೧೨-೫-೧೯೮೪	ಮೇಲಿನಂತೆ
೩೦	೧೯೮೪ನೇ ಇಸವಿಯ ಕರ್ನಾಟಕ ಖನಿಜ ಹಕ್ಕುಗಳ (ತೆರಿಗೆ) ವಿಧೇಯಕ	೬-೬-೧೯೮೪	ಮೇಲಿನಂತೆ
೩೧	೧೯೮೩ನೇ ಇಸವಿಯ ದಂಡ ಪ್ರಕ್ರಿಯೆ ಸಂಹಿತೆಯ (ಕರ್ನಾಟಕ ತಿದ್ದುಪಡಿ) ವಿಧೇಯಕ	೧೯-೬-೧೯೮೪	ಮೇಲಿನಂತೆ
೩೨	೧೯೮೪ನೇ ಇಸವಿಯ ಕರ್ನಾಟಕ ಪುರಸಭೆಗಳ (ತಿದ್ದುಪಡಿ) ವಿಧೇಯಕ	೨೩-೬-೧೯೮೪	ಮೇಲಿನಂತೆ
೩೩	೧೯೮೪ನೇ ಇಸವಿಯ ಕರ್ನಾಟಕ ನಗರ ಪಾಲಿಕೆಗಳ ಮತ್ತು ಇತರೆ ಕೆಲವು ಕಾನೂನುಗಳಿಗೆ ಸಂಬಂಧಿಸಿದ (ತಿದ್ದುಪಡಿ) ವಿಧೇಯಕ	೨೬-೬-೧೯೮೪	ಮೇಲಿನಂತೆ
೩೪	೧೯೮೫ನೇ ಇಸವಿಯ ಸಾರ್ವಜನಿಕ ಪರಿಮಿತಿಯ ವಿಸ್ತರಣೆ (ಕರ್ನಾಟಕ ತಿದ್ದುಪಡಿ) ವಿಧೇಯಕ	೪-೭-೧೯೮೪	ರಾಷ್ಟ್ರಾಧ್ಯಕ್ಷರು
೩೫	೧೯೮೩ನೇ ಇಸವಿಯ ಕರ್ನಾಟಕ ರಾಜ್ಯದ ಶಿಕ್ಷಣ ಸಂಸ್ಥೆಗಳಲ್ಲಿ (ಕ್ಯಾಪಿಟೇಶನ್ ಶುಲ್ಕ ನಿಷೇಧಿಸುವುದು) ಸಂಬಂಧಪಟ್ಟ ವಿಧೇಯಕ	೨೨-೭-೧೯೮೪	ಮೇಲಿನಂತೆ
೩೬	೧೯೮೩ನೇ ಇಸವಿಯ ಕರ್ನಾಟಕ ರಾಜ್ಯದ ಬಳಕೆ ಉಪಯೋಗ ಮತ್ತು ಮಾರಾಟಕ್ಕಾಗಿ ಸ್ಥಳೀಯ ಪ್ರದೇಶದೊಳಗೆ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಕ	೨೮-೯-೧೯೮೪	ರಾಜ್ಯಪಾಲರು
೩೭	೧೯೮೪ನೇ ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ	೨೦-೧೦-೧೯೮೪	ಮೇಲಿನಂತೆ

೧	೨	೩	೪
೩೮	೧೯೮೪ನೇ ಇಸವಿಯ ಕರ್ನಾಟಕ ರಾಜ್ಯದ ಹಣ ವಿನಿಯೋಗಕ್ಕೆ ಸಂಬಂಧಿಸಿದ (ಸಂಖ್ಯೆ ೩) ವಿಧೇಯಕ	೨೬-೧೦-೧೯೮೪	ಮೇಲಿನಂತೆ
೩೯	೧೯೮೪ನೇ ಇಸವಿಯ ಕರ್ನಾಟಕ ರಾಜ್ಯದ ಹಣ ವಿನಿಯೋಗಕ್ಕೆ ಸಂಬಂಧಿಸಿದ (ಸಂಖ್ಯೆ ೪) ವಿಧೇಯಕ	೨೬-೧೦-೧೯೮೪	ಮೇಲಿನಂತೆ
೪೦	೧೯೮೩ನೇ ಇಸವಿಯ ಕರ್ನಾಟಕ ರಾಜ್ಯದ ಮನರಂಜನಾ ತೆರಿಗೆ (ಎರಡನೆಯ ತಿದ್ದುಪಡಿ) ವಿಧೇಯಕ	೨೮-೧೨-೧೯೮೪	ರಾಷ್ಟ್ರಾಧ್ಯಕ್ಷರು
೪೧	೧೯೮೩ನೇ ಇಸವಿಯ ಕರ್ನಾಟಕ ರಾಜ್ಯದ ವೃತ್ತಿ, ವ್ಯಾಪಾರಿಗಳು ಮತ್ತು ಸೇವೆಗಳು ಮತ್ತು ನೌಕರಿಗಳ ಮೇಲೆ ತೆರಿಗೆ ವಿಧಿಸುವ ಬಗ್ಗೆ (ತಿದ್ದುಪಡಿ) ವಿಧೇಯಕ	೨೯-೧೨-೧೯೮೪	ಮೇಲಿನಂತೆ

ಅಧ್ಯಕ್ಷರು.—ಕಾಗದಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಗಿದೆ. ಈಗ ಸಭೆಯು ಎದು ನಾಳೆ ಬೆಳಿಗ್ಗೆ ೧೧ ಗಂಟೆಗೆ ಸೇರುವುದು.

(ಸಭೆಯು ಸಂಜೆ ೫-೨೫ಕ್ಕೆ ಎದ್ದು ನಾಳೆ ತಾ॥ ೧೯-೩-೮೫ರ ಬೆಳಿಗ್ಗೆ ೧೧ ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)